10) ಅಧ್ಯಕ್ಷರ ಅಪ್ಪಣೆ ಮೇರೆಗೆ

(ಗೊಂದಲ)

ವಿಷಯ: ನೀರಾ ಬಗ್ಗೆ ಚರ್ಚಿಸಲು ಅವಕಾಶ ನೀಡುವ ಬಗ್ಗೆ.

+ ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ): ಮಾನ್ಯ ಅಧ್ಯಕ್ಷರೆ, ನಾಳಿನ ಕಾರ್ಯಕಲಾಪಗಳ ಬಗ್ಗೆ ಏನು ತೊಂದರೆಯಾಗುತ್ತದೆಂದರೆ, ಪತ್ತೀಯ ಕಾರ್ಯಕಲಾಪಗಳನ್ನು ಬೆಳಿಗ್ಗೆ ತೆಗೆದುಕೊಂಡು ನಂತರ ಪ್ರಶ್ನೋತ್ತರಗಳನ್ನು ತೆಗೆದುಕೊಂಡು ತದನಂತರ ನೀರಾ ಬಗ್ಗೆ ಚರ್ಚೆಗೆ ತೆಗೆದುಕೊಂಡರೆ ಅನುಕೂಲವಾಗುತ್ತದೆ. ಇವೊತ್ತು ರಾಜ್ಯದ ಲಕ್ಷಾಂತರ ತೆಂಗುಬೆಳೆಗಾರರು ಸತ್ಯಾಗ್ರಹ ಮಾಡುವಂತಹ ಸಂದರ್ಭದಲ್ಲಿ ಅದರ ಬಗ್ಗೆ ಸ್ಪಷ್ಟವಾದಂತಹ ಉತ್ತರ ಸರ್ಕಾರದಿಂದ ಇನ್ನು ಬಂದಿಲ್ಲ. ಪತ್ತೀಯ ಕಾರ್ಯಕಲಾಪಗಳ ವಿಚಾರದಲ್ಲಿ ನಾವು ಮಾತು ಕೊಟ್ಟಂತೆ ಅಧಿಕೃತ ವಿರೋಧಪಕ್ಷದವರು, ಪಕ್ಕದಲ್ಲಿರುವಂತಹ ವಿರೋಧಪಕ್ಷದವರು ಮುಖ್ಯಮಂತ್ರಿಗಳಿಗೆ ಅವರ ಅಪೇಕ್ಷೆ ಮೇರಿ ಸಹಕಾರವನ್ನು ಕೊಟ್ಟಿದ್ದೇವೆ. ನಿಯಮ-69ರ ಅಡಿಯಲ್ಲಿ ನೀರಾ ಬಗ್ಗೆ ನಾವೇನು ಚರ್ಚಿಸಬೇಕೆಂದು ಇದ್ದೇವೆ, ಅದಕ್ಕೆ ಒಂದು ಸಮಯವನ್ನು ತಾವು ನಿಗದಿಪಡಿಸಿ. ನಮ್ಮ ನಮ್ಮ ಪಕ್ಷಗಳ ಶಕ್ತಿಗಳ ಆಧಾರದ ಮೇಲೆ ನಾವು ಹಂಚಿಕೊಂಡು ಮಾತನಾಡುತ್ತೇವೆ.

ಅಧ್ಯಕ್ಷರು: ಸರ್ಕಾರದವರನ್ನು ಒಂದು ಮಾತು ಕೇಳಿ, ಆದಷ್ಟು ಬೇಗ ಅದರ ಚರ್ಚೆಗೆ ಸಮಯ ನಿಗದಿಪಡಿಸೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಮುಖ್ಯಮಂತ್ರಿಗಳು ಅನಾವಶ್ಯಕವಾಗಿ ನಮ್ಮೆಲ್ಲರ ಮೇಲೆ ಸಿಟ್ಟುಮಾಡಿಕೊಂಡು ನಾವು ಯಾವ ಕಾರ್ಯಕಲಾಪಗಳನ್ನು ನಡೆಸುವುದೇ ಇಲ್ಲವೇನೋ ಎನ್ನತಕ್ಕಂತಹ ಮಾತನ್ನು ಹೇಳಿ ಮಾನ್ಯ ವಿಶ್ವೇಶ್ವರ ಹೆಗಡೆಯವರು ಮಾತನಾಡುವಂತಹ ಸಂದರ್ಭದಲ್ಲಿ ಅವರಿಗೆ ಖಾರವಾಗಿ ಮಾತನಾಡಿರತಕ್ಕಂಥದ್ದನ್ನು ನೋಡಿದ್ದೇವೆ. ನಾವು ಎಲ್ಲಾ ರೀತಿಯಲ್ಲೂ ಅವರಿಗೆ ಸಹಕಾರವನ್ನು ಕೊಟ್ಟಿದ್ದೇವೆ. ಇಂತಹ ಸನ್ನಿವೇಶದಲ್ಲಿ ತಾವು ನಮ್ಮ ಸಹಕಾರಕ್ಕೆ ಬರದೆ ಹೋದರೆ ಕಷ್ಟವಾಗುತ್ತದೆ. ನಾವು ಬಿಎಸಿಯಲ್ಲಿ ಚರ್ಚಿಸಿದಂತೆ ನೀರಾ ಬಗ್ಗೆ ಹಾಗೂ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುವ ಬಗ್ಗೆ ಚರ್ಚಿಸಬೇಕಾಗಿತ್ತು.

ಅಧ್ಯಕ್ಷರು: ನಾಡಿದ್ದು ಬ್ಯಾಕ್‌ಲಾಗ್ ಹುದ್ದೆಗಳ ಫಿಲ್‌ಅಪ್ ಮಾಡುವ ಬಗ್ಗೆ ಚರ್ಚಿಸಲು ಅವಕಾಶ ಕೊಡೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾನೊಬ್ಬ ಶಾಸಕನಾಗಿ ಮಾತನಾಡುತ್ತಿಲ್ಲ, ನಾನು ಒಂದು ಶಾಸಕಾಂಗ ಪಕ್ಷದ ನಾಯಕನಾಗಿ ಏನಂತಿಸುವುದೇನೆಂದರೆ, ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುವಂತಹ ಅನೇಕ ಪ್ರಶ್ನೆಗಳಿವೆ. ನನಗೆ ತಿಳಿದಂತೆ ಸುಮಾರು 100 ಪ್ರಶ್ನೆಗಳು

ಬಾಕಿ ಇವೆ,

ಅಧ್ಯಕ್ಷರು: 30 ಪ್ರಶ್ನೆಗಳು ಬಾಕಿ ಇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಆ 30 ಪ್ರಶ್ನೆಗಳಿಗೂ 2 ನಿಮಿಷದಂತೆ 60 ನಿಮಿಷಗಳು ಬೇಕಾಗುತ್ತವೆ. ಮೊದಲನೆ ಬೆಂಚಿನಲ್ಲಿರುವ ನಮ್ಮ ಮುಖಂಡರುಗಳು, ನಾಯಕರುಗಳು ಸದನದಲ್ಲೂ ನಮಗೆ ಸಿಗುವುದಿಲ್ಲ. ಇನ್ನು ಹೊರಗಡೆ ನಮ್ಮ ಶಾಸಕರ ಪಾಡೇನು? ಇಂತಹ ಸನ್ನಿವೇಶದಲ್ಲಿ ಇಂತಹ ವಿಚಾರಗಳಿಗೆ ಮಹತ್ವ ಕೊಡಬೇಕಾಗಿದೆ. ಸಹಕಾರ ಮತ್ತು ಶಿಕ್ಷಣ ಕ್ಷೇತ್ರಗಳ ಮಸೂದೆಗಳ ಬಗ್ಗೆ ಬಹಳ ಪ್ರಮುಖವಾಗಿ ಚರ್ಚೆಯಾಗಬೇಕಾಗಿದೆ. ಅವೆರಡನ್ನು ಬಿಟ್ಟರೆ ಸರ್ಕಾರ ತೆಗೆದುಕೊಳ್ಳುವ ಕ್ರಮಗಳ ಬಗ್ಗೆ ನಮ್ಮದೇ ಆದ ಅಭಿಪ್ರಾಯಗಳಿದ್ದರೂ ಸಹ ನಾವು ಅದನ್ನು ಅಡ್ಡಿಪಡಿಸುವುದಿಲ್ಲ. ಅವರಿಗೆ ಮೆಜಾರಿಟಿ ಇದೆ ಎಂಬ ಕನಿಷ್ಠ ನಾಲೆಡ್ಜ್ ನಮಗಿದೆ. ಆ ಎರಡು ಮಸೂದೆಗಳಲ್ಲದೆ, ಆಡಳಿತ ಹಾಗೂ ವಿರೋಧಪಕ್ಷದ ಸದಸ್ಯರು ಕೇಳಿರುವಂತಹ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುವಂತಹ ಪ್ರಸ್ತಾವನೆಗಳು ಮತ್ತು ಕೆಲವು ಮಹತ್ವವಿರುವ ವಿಚಾರಗಳನ್ನು ನಾಳೆ ಮತ್ತು ನಾಡಿದ್ದರಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು. ಗೌರವಾನ್ವಿತ ಆಡಳಿತ ಪಕ್ಷದವರು ಮತ್ತು ವಿರೋಧಪಕ್ಷದವರು ಕೇಳಿರತಕ್ಕ ಪ್ರಶ್ನೆಗಳು ಶೂನ್ಯವೇಳೆಯಲ್ಲಿ ಎತ್ತಿರತಕ್ಕ ವಿಷಯಗಳು ಮತ್ತು ಕೆಲವು ಮಹತ್ವವಾದ ವಿಚಾರಗಳು ಇವೆ. ನಾವು ಈ ಸದನದಿಂದ ಹೊರಗಡೆ ಹೋದರೆ ಇನ್ನು ಆರು ತಿಂಗಳು ಸಭೆ ಸೇರುವುದಿಲ್ಲ. ನಾನು ಪ್ರಾಮಾಣಿಕವಾಗಿ ಹೇಳಬೇಕೆಂದರೆ ತಾವು ಈ ಸದನದಲ್ಲಿ ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೆ ಆಡಳಿತ ಪಕ್ಷದವರಿಗೆ ವಿರೋಧ ಪಕ್ಷದವರಿಗೆ ಸಮಾನದೃಷ್ಟಿಯಿಂದ ನೋಡಿ ಸಾಕಷ್ಟು ಅವಕಾಶವನ್ನು ಕೊಟ್ಟು ಸಹಕರಿಸಿದ್ದೀರಿ. ಆದರೆ ಸರ್ಕಾರದ ಮೊಂಡುತನ 16ನೇ ತಾರೀಖು ಅಸೆಂಬ್ಲಿ ಕರೆದು 30ನೇ ತಾರೀಖು ಪಾಸ್ ಮಾಡಿಕೊಡಿಯೆಂದು ಹೇಳಿ ಆಮೇಲೆ ಏನೋ ಕನ್ಸಿಷನ್ ಕೊಟ್ಟ ಹಾಗೆ ನಾಲ್ಕು ದಿವಸ ನಡೆಸಿ ನಿಮ್ಮ ಭುಜದ ಮೇಲೆ ಭಾರ ಹಾಕತಕ್ಕದ್ದು ನಿಮ್ಮನ್ನು ಆಕ್ಷೇಪ ಮಾಡತಕ್ಕದ್ದು ನಿಮ್ಮ ಮೇಲೆ ಒತ್ತಡ ತರತಕ್ಕದ್ದು ಸರಿಯಲ್ಲ. ಆಕ್ಷೇಪ ಮಾಡುವುದು ಸರಿಯಲ್ಲ. ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ, ತಡೆಹಿಡಿದಿರತಕ್ಕ ಪ್ರಶ್ನೆಗಳ ವಿಚಾರದಲ್ಲಿ ತಡವಾದರೂ ಪರವಾಗಿಲ್ಲ, ಪತ್ರಿಕೆಗಳವರು ಒಂದೆರಡು ದಿವಸ ನಾವು ಹೇಳಿರತಕ್ಕ ವಿಚಾರಗಳನ್ನು ಪ್ರಚಾರ ಮಾಡದಿದ್ದರೂ ಪರವಾಗಿಲ್ಲ. ಪಾಪ ಅವರು ಬೆಳಿಗ್ಗೆ 8 ಗಂಟೆಗೆ ಬಂದು ರಾತ್ರಿ 10 ಗಂಟೆಗೆ ಹೋಗುತ್ತಾರೆ. ನಾನು ಹೇಳಿರುವ ವಿಚಾರವನ್ನು ಆಡಳಿತ ಪಕ್ಷದವರು ಒಪ್ಪುತ್ತಾರೆಂದು ತಿಳಿದುಕೊಂಡಿದ್ದೇನೆ. ಸಭಾನಾಯಕರು ಹಾಗೂ ಮಾನ್ಯ ಕಾನೂನು ಸಚಿವರ ಜೊತೆಯಲ್ಲಿ ತಾವು ಚರ್ಚೆ ಮಾಡಿ ದಯವಿಟ್ಟು ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ನಾಳೆ ಪತ್ತೀಯ ಕಾರ್ಯಕಲಾಪಗಳು ಆದ ಮೇಲೆ ಸಭೆಯನ್ನು ಅನಿರ್ದಿಷ್ಟ ಕಾಲದವರೆಗೂ ಮುಂದೂಡಲಾಗಿದೆ ಅಂದರೆ ಕೆಲಸ ಅಲ್ಲಿಗೆ ಮುಗಿಯುತ್ತದೆ. ನೀವು ಬಿಲ್‌ಗಳನ್ನು ತಂದಾಗ ನಾವು ಧರಣಿ ಮಾಡೇ

ಮಾಡುತ್ತೇವೆನ್ನುವುದು ತಮಗೆ ಗೊತ್ತಿದೆ.

ಅಧ್ಯಕ್ಷರು: ತಾವು ಅದಕ್ಕೆ ಅವಕಾಶ ಮಾಡಿಕೊಡಬೇಡಿ. ನಮಗೆ ಸಹಕಾರ ಕೊಡಿ ಸಭೆಯನ್ನು ಮುಂದುವರೆಸಿ. ಈಗ ಸದನವನ್ನು ನಾಳೆ ಬೆಳಿಗ್ಗೆ 10.30ರ ವರೆಗೆ ಮುಂದೂಡುತ್ತಿದ್ದೇನೆ.

ಸದನವು 7 ಗಂಟೆ 42 ನಿಮಿಷಗಳಿಗೆ ಮುಂದೂಡಲ್ಪಟ್ಟು 3ನೇ ಆಗಸ್ಟ್ ಶುಕ್ರವಾರದಂದು ಬೆಳಿಗ್ಗೆ 10.30ಕ್ಕೆ ಸೇರಲು ನಿರ್ಧರಿಸಿತು.

(+ ಈ ಚಿಹ್ನೆ ಮಾನ್ಯ ಸದಸ್ಯರ ಟಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)